**ಸಿ. ಸಿ. ನಂ. 1096/2019**

**ಪಿ ಡಬ್ಲ್ಯೂಃ 5**

**ಸಾಕ್ಷಿಯು ದಿನಾಂಕಃ** 15-11-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ಅವರಿಂದ**

ದಿಃ **17-06-2019** ರಂದು ಪೋಲಿಸರು ನನ್ನ ಸಮಕ್ಷಮ **2** ಪಂಚನಾಮೆಗಳನ್ನು ಮಾಡಿದ್ದರು. ಸಾಕ್ಷಿ ನಿಪಿಃ **13** ಮತ್ತು **14** ರ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಈಗಾಗಲೇ ನಿಪಿಃ **13** ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿಃ **13 (ಬಿ)** ಎಂದು ಗುರುತಿಸಲಾಗಿದೆ. ನಿಪಿಃ **14** ರಲ್ಲಿನ ಸಹಿಯನ್ನು ಈಗ ನಿಪಿಃ **14 (ಬಿ)** ಎಂದು ಗುರುತಿಸಲಾಯಿತು. ಪೋಲಿಸರು ಬಂದಾಗ ಪಿರ್ಯಾದುದಾರರ ಪಿಗಮಿ ಠೇವಣಿ ಅರ್ಜಿ, ವೋಚರ್, ಪಿಗಮಿ ಠೇವಣಿ ಮೇಲೆ ಸಾಲ ಕೋರಿ ಅರ್ಜಿ, ಅವಧಿಗೂ ಮುಂಚೆ ಪಿಗಮಿ ಠೇವಣಿಯನ್ನು ವಾಪಸ್ ನೀಡಲು ಮನವಿ ಪತ್ರಗಳನ್ನು ವ್ಯವಸ್ಥಾಪಕರು ಹಾಜರುಪಡಿಸಿದ್ದರು. ಸದರಿ ದಾಖಲೆಗಳು **2013** ರಿಂದ **2016** ರವರೆಗಿನ ದಾಖಲೆಗಳು ಆಗಿದ್ದವು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಕ್ಯೂ **1** ರಿಂದ ಕ್ಯೂ **5** ಎಂದು ಗುರುತಿಸಲಾಗಿದ್ದ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿಃ **23** ರಿಂದ **27** ಎಂದು ಗುರುತಿಸಲಾಯಿತು.

ಪಂಚನಾಮೆ ಕಾಲಕ್ಕೆ ಪೋಟೋ ಗಳನ್ನು ತೆಗೆಯಲಾಗಿತ್ತು. ಸಾಕ್ಷಿ ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿಃ **15** ಎಂದು ಗುರುತಿಸಲಾಗಿದೆ. ಸಾಕ್ಷಿ ಇನ್ನೂ **2** ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿಃ **28** ಎಂದು ಗುರುತಿಸಲಾಯಿತು.

**ಸಿ. ಸಿ. ನಂ. 1096/2019**
**ಪಿ ಡಬ್ಲ್ಯೂ: 5**

**<u>ಪಾಟಿ ಸವಾಲು: ಆರೋಪಿ ಪರ ವಕೀಲರಿಂದ</u>**

ಆರೋಪಿ ಪರ ವಕೀಲರನ್ನು ಕೂಗಿ ಕರೆಯಲಾಗಿ, ಗೈರು ಹಾಜರು ಇದ್ದು, ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ: ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.